<u>ದಿನಾಂಕಃ **21-10-2022** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>

<u>ಪ್ರತಿವಾದಿ ಪರ ಮುಂದುವರೆದ ಪಾಟೀ ಸವಾಲು ಶ್ರೀ ಕೆ.ಎಸ್.ವಿ. ವಕೀಲರಿಂದಃ-</u>

8.ದಾವಾ ಆಸ್ತಿಯು ಮೂಲತಃವಾಗಿ ಯಾರಿಗೆ ಸೇರಿದ್ದು ಎಂದರೆ ನಮಗೆ ಸೇರಿದ್ದು. ದಾವಾ ಆಸ್ತಿಯು 9-5-2003 ರಂದು ಕ್ರಯದ ಮೂಲಕ ನಮಗೆ ಬಂದಿರುತ್ತದೆ. ದಾವಾ ಆಸ್ತಿಯನ್ನು ಪ್ರಭಾಕರ ಬಿನ್ ಗೋವಿಂದರಾಯ್ಕರ್ ಎನ್ನುವವರಿಂದ ಖರೀದಿ ಮಾಡಿರುತ್ತೇವೆ. ಸದರಿ ಪ್ರಭಾಕರರವರಿಗೂ ಸಹಾ ಕ್ರಯಪತ್ರದ ಮೂಲಕ ಬಂದಿರುತ್ತದೆ . ಅವರು ಅದನ್ನು ಗೋಪಾಲಪ್ಪ ಬಿನ್ ನಾರಾಯಣಪ್ಪರವರಿಂದ ಖರೀದಿ ಮಾಡಿರುತ್ತಾರೆ.

9. ಪ್ರತಿವಾದಿಯ ಗಂಡನ ತಂದೆಯ ಹೆಸರು ಏನು ಇರುತ್ತದೆ ಎಂದರೆ ರಂಗಪ್ಪ ಎಂದು ಇರಬಹುದು ಖುದ್ದು ಮಾಹಿತಿ ಇಲ್ಲ. ಪ್ರತಿವಾದಿಯ ಮಾವನಾದ ರಂಗಪ್ಪನಿಗೆ ದುರುಗಪ್ಪ ತಂದೆ ಹನುಮಂತಪ್ಪ ಎನ್ನುವ ಚಿಕ್ಕಪ್ಪ ಇದ್ದರು ಎಂದರೆ ಸರಿ. ಸದರಿ ರಂಗಪ್ಪರವರು ಸರ್ವೆ ನಂ 3 ರಲ್ಲಿ 23 ಗುಂಟೆ ಜಮೀನನ್ನು ಖರೀದಿ ಮಾಡಿದ್ದರು. ಸದರಿ ಖರೀದಿಪತ್ರವನ್ನು ನಾನು ನೋಡಿರುತ್ತೇನೆ. ಸದರಿ ಸರ್ವೆ ನಂ 3 ರಲ್ಲಿ ರಂಗಪ್ಪರವರು 30 ಗುಂಟೆ ಜಮೀನನ್ನು ಮಂಜಪ್ಪ ತಂದೆ ಭವಾನಪ್ಪರವರಿಂದ ಖರೀದಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ಕ್ರಯಪತ್ರ 30 ಗುಂಟೆಗೆ ಆಗಿರುತ್ತದೆ , ಅದರೆ ಎಂಆರ್ 23 ಗುಂಟೆಗೆ ಇರುತ್ತದೆ ಎಂದು ಹೇಳುತ್ತಾರೆ. ರಂಗಪ್ಪ ಮತ್ತು ಅವನ ಚಿಕ್ಕಪ್ಪನಾದ ದುರುಗಪ್ಪರವರ ನಡುವೆ ಜುಬಾನಿ ಹಿಸ್ಸೆ ಆಗಿರುತ್ತದೆ ಎಂದರೆ ಸರಿ. ಸದರಿ ದುರುಗಪ್ಪ ಮ್ಯುಟೇಷನ್ ಮಾಡಿಕೊಳ್ಳುವಾಗ ರಂಗಪ್ಪನಿಗೆ ಏನು ಒಪ್ಪಿಗೆ ಕೊಟ್ಟಿದ್ದರು ಎನ್ನುವ ಬಗ್ಗೆ ಗೊತ್ತಾ ಎಂದರೆ ಗೊತ್ತಿಲ್ಲ. ದುರುಗಪ್ಪ ರಂಗಪ್ಪನ ಹೆಸರಿಗೆ 30 ಗುಂಟೆ ಮ್ಯುಟೇಷನ್ ಮಾಡಲು ಒಪ್ಪಿಗೆ ಕೊಟ್ಟರು ಎಂದರೆ ಸರಿಯಲ್ಲ. 30 ಗುಂಟೆ ಮ್ಯುಟೇಷನ್‌ಗೆ ಒಪ್ಪಿಗೆ ಕೊಟ್ಟಿದ್ದರೂ ಸಹಾ ನಾನು 23 ಗುಂಟೆಗೆ ಒಪ್ಪಿಗೆ ಕೊಟ್ಟಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದರೆ ಕಂದಾಯ ಇಲಾಖೆ ಅಧಿಕಾರಿಗಳು ಶಾಮೀಲಾಗಿ 23 ಗುಂಟೆ ಮಾತ್ರ ಮ್ಯುಟೇಷನ್ ಮಾಡಿದರು ಎಂದರೆ ಸರಿಯಲ್ಲ. ಮೊದಲು

30 ಗುಂಟೆ ಎಂದು ಬರೆದು ನಂತರ ಪ್ರಭಾವಕ್ಕೆ ಒಳಗಾಗಿ 23 ಗುಂಟೆ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿಯು 23 ಗುಂಟೆ ಎಂದು ಸ್ಪಷ್ಟವಾಗಿ ಬರೆದದ್ದು ಕಾಣುತ್ತದೆ ಎಂದು ಹೇಳುತ್ತಾರೆ.

10. ರಂಗಪ್ಪನಿಗೆ 30 ಗುಂಟೆ ಜಮೀನನ್ನು 1960 ರಿಂದ 1995 ರವರಿಗೆ ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ರಂಗಪ್ಪನಿಗೆ ಅಕ್ಕತಂಗಿಯರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ರಂಗಪ್ಪ ಮತ್ತು ರಂಗಪ್ಪನ ತಂಗಿ ಸುಂಕಮ್ಮಳ ಮಗ ಹನುಮಂತಪ್ಪನ ಮಧ್ಯೆ 30 ಗುಂಟೆ ವಿಭಾಗ ಆಗಿರುತ್ತದೆ ಎಂದರೆ ಸರಿಯಲ್ಲ. ಅದೇ ರೀತಿ ಹನುಮಂತಪ್ಪನಿಗೆ ಎಂಆರ್ ನಂ 19/91-92 ರಲ್ಲಿ ಖಾತೆ ಬದಲಾವಣೆ ಆಗಿರುತ್ತದೆ ಎಂದರೆ ಸಾಕ್ಷಿಯು 10 ಗುಂಟೆ ಮಾತ್ರ ಆಯಿತು ಎಂದು ಹೇಳುತ್ತಾರೆ.

11. ರಂಗಪ್ಪ ಯಾವ ವರುಷ ತೀರಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ರಂಗಪ್ಪ ತೀರಿಕೊಂಡ ನಂತರ ಅವರ ಹೆಂಡತಿ ಯಲ್ಲಮ್ಮ , ಅವರ ಮಗ ಹಾಲೇಶಪ್ಪ ಮತ್ತು ಪುಟ್ಟಪ್ಪನಿಗೆ ಮ್ಯುಟೇಷನ್ ಬದಲಾವಣೆ ಆಯಿತು ಎಂದರೆ ಸರಿ . ಆದರೆ 23 ಗುಂಟೆ ಆಗಿರುತ್ತದೆ. ಸದರಿ ಜಮೀನನ್ನು ಹಾಲೇಶಪ್ಪ 23 ಗುಂಟೆ ಜಮೀನನ್ನು ಸಾಗುವಳಿ ಮಾಡುತ್ತಿದ್ದರು ಎಂದು ಸಾಕ್ಷಿ ಹೇಳುತ್ತಾರೆ. ನಂತರ ಹಾಲೇಶಪ್ಪ ಪ್ರತಿವಾದಿಗೆ ಮಾರಾಟ ಮಾಡಿದರು ಎಂದರೆ ಸರಿ. ಅದೇ ರೀತಿ ಹನುಮತಂಪ್ಪ ತನಗೆ ಬಂದ ಹಿಸ್ಸೆಯನ್ನು ಚಂದ್ರಮ್ಮಳಿಗೆ ಮಾರಾಟ ಮಾಡಿದ ಎಂದರೆ ಸರಿ.

12. ಎಂಆರ್ ನಂ 19/1990-92, ಎಂಆರ್ ನಂ 7/2004-05 ಹಾಗೂ ಎಂಆರ್ ನಂ 4/2004-05 ರಂತೆ 13 ಗುಂಟೆ ಮತ್ತು 10 ಗುಂಟೆ ಖಾತೆ ಬದಲಾವಣೆ ಆದರೂ ಸಹಾ ಪ್ರತಿವಾದಿಯು ಉಳಿದ 17 ಗುಂಟೆ ಜಮೀನನ್ನು ಸಾಗುವಳಿ ಮಾಡತ್ತಾ ಬಂದಿದ್ದಾರೆ ಎಂದರೆ ಸಾಕ್ಷಿಯು 23 ಗುಂಟೆ ಮಾತ್ರ ಸಾಗುವಳಿ ಮಾಡುತ್ತಿದ್ದಾರೆ ಎಂದು ಹೇಳುತ್ತಾರೆ. ಅದೇ ರೀತಿ

ರಂಗಪ್ಪ ತೀರಿಕೊಂಡ ನಂತರ ಅವರ ಹೆಂಡತಿ ಯಲ್ಲಮ್ಮ ಹಾಗೂ ಮಕ್ಕಳಾದ ಹಾಲೇಶಪ್ಪ ಮತ್ತು ಪುಟ್ಟಪ್ಪ ಹಾಗೂ ರಂಗಪ್ಪನ ಅಕ್ಕನ ಮಗನಾದ ಹನುಮಂತಪ್ಪ 23 ಗುಂಟೆ ಹಾಗೂ 17 ಗುಂಟೆಯನ್ನು ಸಾಗುವಳಿ ಮಾಡುತ್ತಾ ಬಂದಿದ್ದಾರೆ ಎಂದರೆ ಸರಿಯಲ್ಲ.

13. ಪ್ರತಿವಾದಿಯರು ಅವರ ಜಮೀನಿನಲ್ಲಿ ಅಡಿಕೆ ಸಸಿಗಳನ್ನು ಹಚ್ಚಿರುತ್ತಾರೆ. 23 ಗುಂಟೆಯಲ್ಲಿ ಇದ್ದ ಅಡಿಕೆ ಮರಗಳು 3 ವರುಷಆಗಿರುತ್ತದೆ. 2018 ರಲ್ಲಿ ನಮ್ಮಿಂದ ದೌರ್ಜನ್ಯ ಮಾಡಿಕೊಂಡು ತೆಗೆದುಕೊಂಡು ಅದರಲ್ಲಿ 6 ತಿಂಗಳ ಹಿಂದೆ ಅಡಿಕೆ ಮರ ಹಚ್ಚಿರುತ್ತಾರೆ . 23 ಗುಂಟೆಯಲ್ಲಿ 4 ವರುಷದ ಅಡಿಕೆ ಮರಗಳು ಹಾಗೂ 17 ಗುಂಟೆಯಲ್ಲಿ 3 ವರುಷದ ಅಡಿಕೆ ಮರಗಳು ಇರುತ್ತವೆ ಎಂದರೆ ಸರಿಯಲ್ಲ. ಸದರಿ ಜಮೀನಿನಲ್ಲಿ ಸಮಾಧಿಗಳು ಇರುವುದಿಲ್ಲ.

14. ದಾವಾ ಆಸ್ತಿಯ ಜಮೀನಿನ ಪೂರ್ವ ದಿಕ್ಕಿನಲ್ಲಿ ಪ್ರತಿವಾದಿಯ ಮಾವನಾದ ರಂಗಪ್ಪ ಮತ್ತು ರಂಗಪ್ಪನ ತಂದೆಯಾದ ಹುಲಿಯಪ್ಪನ ಸಮಾಧಿಗಳು ಇರುತ್ತವೆ ಎಂದರೆ ಸಾಕ್ಷಿಯು ಮೊದಲು ಇರಲಿಲ್ಲ ಹಾಗೂ ಈಗ ಒಂದೂವರೆ ವರುಷದ ಹಿಂದೆ ಸೃಷ್ಟಿ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸಾಕ್ಷಿಗೆ ಛಾಯಾಚಿತ್ರ ತೋರಿಸಿ ಇದರಂತೆ 1995 ರಿಂದ ಸಮಾಧಿ ಇರುತ್ತದೆ ಎಂದರೆ ಸಾಕ್ಷಿಯು ಒಂದು ವರುಷದ ಹಿಂದೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ಸದರಿ ಛಾಯಾಚಿತ್ರವನ್ನು ನಿಡಿ 1 ಎಂದು ಗುರುತಿಸಲಾಯಿತು.

15. ಪ್ರತಿವಾದಿಗಳು ಖರೀದಿ ಮಾಡಿದ ಆಸ್ತಿಗೆ ಮತ್ತು 10 ಗುಂಟೆಗೆ ಒಟ್ಟು 40 ಗುಂಟೆಗೆ ತಂತಿಬೇಲಿ ಇರುತ್ತದೆ ಎಂದರೆ ಸರಿ . ನಮ್ಮ ಜಮೀನಿಗೆ ಕೂಡಿ ತಂತಿಬೇಲಿ ಹಾಕಿರುತ್ತಾರೆ. ಸದರಿ ತಂತಿಬೇಲಿ ಒಂದೂವರೆ ವರುಷದ ಹಿಂದೆ ಹಾಕಿರುತ್ತಾರೆ ಎಂದು ಹೇಳುತ್ತಾರೆ. 2004 ಮತ್ತು 5 ರಿಂದ ತಂತಿಬೇಲಿ ಇರುತ್ತದೆ ಎಂದರೆ ಸರಿಯಲ್ಲ.

16. ನಮ್ಮ ಮೂಲ ಖರೀದಿದಾರರಾದ ಪ್ರಭಾಕರ ರಾಯ್ಕರ್ ರವರಿಗೆ ಹಾಗೂ ರಂಗಪ್ಪರ ನಡುವಿನ ಆಸ್ತಿಗಳ ಪೋಡಿ ಆಗಿರುತ್ತದೆಯಾ ಎಂದರೆ ಆಗಿರುತ್ತದೆ ಅದು ತಪ್ಪು ಇರುತ್ತದೆ , ಅದನ್ನು ಡಿಡಿಎಲ್ ಆರ್ ರದ್ದು ಮಾಡಿರುತ್ತಾರೆಂದು ಹೇಳುತ್ತಾರೆ. ಸದರಿ ಪೋಡಿ ಮಾಡಿದ ಮಹಜರ್ ಗೆ ಗೋಪಾಲಪ್ಪ ಮತ್ತು ನಾರಾಯಣಪ್ಪ ಸಹಿ ಮಾಡಿರುತ್ತಾರೆ ಎಂದರೆ ಸರಿ . ಆದರೆ ಸರ್ವೆಯರ್ ತಪ್ಪು ಮಾಡಿರುತ್ತಾನೆ ಎಂದು ಹೇಳುತ್ತಾರೆ. ನಾರಾಯಣಪ್ಪನನ್ನು ನೋಡಿಲ್ಲ. ನಾರಾಯಣಪ್ಪ ಮತ್ತು ಗೋಪಾಲಪ್ಪ ಸಾಗುವಳಿ ರೀತಿ ಫೋಡಿ ಆಗಿದ್ದರಿಂದ ಒಪ್ಪಿ ಸಹಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಪೋಡಿ ಆಧಾರದ ಮೇಲೆ ರಂಗಪ್ಪನ ಹೆಸರಿಗೆ 40 ಗುಂಟೆ ಹಾಗೂ ನಾರಾಯಣಪ್ಪನಿಗೆ 2 ಎಕರೆ ಮಾತ್ರ ಸ್ವಾಧೀನದಲ್ಲಿ ಇದೆ ಎಂದು ಅಕಾರಬಂದುವಿನಲ್ಲಿ ನಮೂದು ಇದೆ ಎಂದರೆ ಅದು ನನಗೆ ಗೊತ್ತಿಲ್ಲ. ಹಾಗಾಗಿ ಪ್ರತಿವಾದಿ ಮತ್ತು ಅವರ ಮಾವ ಮೊದಲಿನಿಂದಲೂ 40 ಗುಂಟೆ ಜಮೀನನ್ನು ಸ್ವಾಧೀನತೆ ಹೊಂದಿದ್ದರು ಎಂದರೆ ಸರಿಯಲ್ಲ . ಮೊದಲು ನಾವು ಸ್ವಾಧೀನದಲ್ಲಿ ಇದ್ದೆವು ಎಂದು ಹೇಳುತ್ತಾರೆ.

17. ಈ ದಾವೆಯನ್ನು ಹಾಕುವಾಗ ನಾವು ಉದ್ದೇಶಪೂರ್ವಕವಾಗಿ ಪೂರ್ವ ದಿಕ್ಕಿಗೆ ವೆಂಕಟೇಶರವರ ಜಮೀನು ಎಂದು ಸುಳ್ಳಾಗಿ ತಿಳಿಸಿದ್ದೆವು ಎಂದರೆ ಸರಿಯಲ್ಲ. ನಾನು ಮತ್ತು ವೆಂಕಟೇಶ ಶಾಮೀಲಾಗಿ ಅಸಲು ದಾವಾ ನಂ 3/2018 ನ್ನು ಪ್ರತಿವಾದಿ ಮೇಲೆ ಈ ನ್ಯಾಯಾಲಯದಲ್ಲಿ ಸುಳ್ಳಾಗಿ ಹಾಕಿದ್ದೇವೆ ಎಂದರೆ ಸರಿಯಲ್ಲ. ನಾರಾಯಣಪ್ಪ ಜೀವಂತ ಇರುವವರೆಗೂ ಪೋಡಿ ದುರಸ್ತಿಯನ್ನು ಪ್ರಶ್ನಿಸಿಲ್ಲ ಎಂದರೆ ಸರಿ. ಅದು ತಪ್ಪಾದ ಬಗ್ಗೆ ಸಹಾ ನಮಗೆ ತಿಳಿಸಿದ್ದರು ಎಂದು ಹೇಳುತ್ತಾರೆ. ಅದೇ ರೀತಿ ನಮಗೆ ಖರೀದಿ ನೀಡಿದ ಪ್ರಭಾಕರ ರಾಯ್ಕರ್ ರವರು ಸಹಾ ಪೋಡಿಯನ್ನು ಪ್ರಶ್ನಿಸಿಲ್ಲ ಎಂದರೆ ಸರಿ . ಅವರು ಸಹಾ ನಮಗೆ ಹೇಳಿದ್ದರು ಎಂದು ಹೇಳುತ್ತಾರೆ. ರಂಗಪ್ಪ ತಾನು 40 ಗುಂಟೆ ಜಮೀನು ಸ್ವಾಧೀನದಲ್ಲಿ ಇದ್ದುದರಿಂದ ಅದನ್ನು ಫಾರಂ ನಂ 9 ಮತ್ತು 12 ರಲ್ಲಿ ಖಾತೆ ಬದಲಾವಣೆ ಮಾಡಲು ರೆವಿನ್ಯೂ

ಕಂದಾಯ ಇಲಾಖೆಯವರಿಗೆ ಅರ್ಜಿಯನ್ನು ನೀಡಿದ್ದರು ಎಂದರೆ ಸರಿಯಲ್ಲ . ಅದೇ ರೀತಿ ಪ್ರತಿವಾದಿಗಳು ಸಹಾ ಅಕಾರಬಂದು ಪ್ರಕಾರ ತಾವು 40 ಗುಂಟೆ ಸ್ವಾ ಧೀನದಲ್ಲಿ ಇದ್ದೆವು ಅದನ್ನು ಬದಲಾವಣೆ ಮಾಡಲು ಹಲವಾರು ಬಾರಿ ಅರ್ಜಿ ನೀಡಿದ್ದರು ಎಂದರೆ ಗೊತ್ತಿಲ್ಲ.

18. ನಾವು ಖರೀದಿ ಮಾಡಿದನಂತರ ಪೋಡಿಯನ್ನು ಎಡಿಎಲ್‌ಆರ್ ಮತ್ತು ಡಿಡಿಎಲ್ ಆರ್ ಮುಂದೆ ಅರ್ಜಿಯನ್ನು ಹಾಕಿದ್ದೆವು ಅವು ವಜಾ ಆದವು ಎಂದರೆ ಸರಿಯಲ್ಲ . ಅವು ನಮ್ಮಂತೆ ಆಗಿರುತ್ತದೆ ಎಂದು ಹೇಳುತ್ತಾರೆ. ಸದರಿ ಆದೇಶದ ವಿರುದ್ಧ ಪ್ರತಿವಾದಿಯು ಜೆಡಿಎಲ್ ಆರ್ ಮುಂದೆ ಮೇಲ್ಮನವಿ ಸಲ್ಲಿಸಿದ್ದಾರೆ ಎಂದರೆ ಸರಿ. ಪ್ರತಿವಾದಿಯರು ಎಡಿಎಲ್ ಆರ್ ಮತ್ತು ಡಿಡಿಎಲ್‌ಆರ್‌ರವರ ಆದೇಶಕ್ಕೆ ನಿರಂತರವಾಗಿ ತಡೆಯಾಜ್ಞೆಯನ್ನು ತೆಗೆದುಕೊಂಡಿದ್ದರು ಎಂದರೆ ಸರಿ. ಕೋವಿಡ್ -19 ಇದ್ದಾಗ ಅದರ ಲಾಭ ತೆಗೆದುಕೊಂಡು ತಡೆಯಾಜ್ಞೆಯನ್ನು ನಾವು ತೆಗೆಸಿರುತ್ತೇವೆ ಎಂದರೆ ಸರಿಯಲ್ಲ. ತಡೆಯಾಜ್ಞೆ ತೆರವುಗೊಳಿಸಿದ ನಂತರ ಕಂದಾಯ ಎರಡು ದಿನಗಳಲ್ಲಿ ಇಲಾಖೆಯೊಂದಿಗೆ ಶಾಮೀಲಾಗಿ ಪಹಣಿ ಪತ್ರಿಕೆಯಲ್ಲಿ ಅಳತೆ ಬದಲಾವಣೆ ಮಾಡಿಕೊಂಡಿದ್ದೇವೆ ಎಂದರೆ ಸರಿ . ಅದನ್ನು ಎರಡು ತಿಂಗಳ ನಂತರ ಮಾಡಿಕೊಂಡಿದ್ದೆವು ಎಂದು ಹೇಳುತ್ತಾರೆ. ಜೆಡಿಎಲ್ ಆರ್ ರವರ ಮುಂದೆ ಇರುವ ಮೇಲ್ಮನವಿಯು ಈಗಲೂ ಚಾಲ್ತಿಯಲ್ಲಿದೆ ಎಂದರೆ ಸರಿ.

19. ನನ್ನ ಪ್ರಮಾಣಪತ್ರವನ್ನು ನಾನೇ ಹೇಳಿ ಬರೆಸಿರುತ್ತೇನೆ. ನನ್ನ ಪ್ರಮಾಣಪತ್ರದಲ್ಲಿರುವ ಅಂಶಗಳು ಸುಳ್ಳಿನಿಂದ ಕೂಡಿರುತ್ತವೆ . ಅದರ ಮೇಲೆ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ನ್ಯಾಯಾಲಯಕ್ಕೆ ಹಾಕಿರುವ ದಾಖಲೆಗಳು ಸೃಷ್ಟಿ ಮಾಡಿಕೊಂಡಿರುವ ದಾಖಲೆಗಳು ಅವುಗಳನ್ನು ದುರುದ್ದೇಶದಿಂದ ಲಾಭ ಮಾಡಿಕೊಳ್ಳಬೇಕು ಎಂದು ಹಾಕಿದ್ದೇವೆ ಎಂದರೆ ಸರಿಯಲ್ಲ.

( ಮರು ವಿಚಾರಣೆ ಇಲ್ಲ ).

(ತೆರೆದನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆ ಬೆರಳಚ್ಚು ಮಾಡಲಾಯಿತು. )

ಓ.ಹೇ.ಕೇ.ಸರಿ.ಇದೆ.

2 ನೇ ಹೆಚ್ಚುವರಿ ವ್ಯವಹಾರ ನ್ಯಾಯಾಧೀಶರು ಮತ್ತು
ಜೆ .ಎಂ.ಎಫ್.ಸಿ. ಶಿಕಾರಿಪುರ.